MYSORE HOUSING BOARD BILL, 1954.

Motion to consider.

Sri A. G. RAMACHANDRA RAO (Minister for Law and Education).—Sir, I move :

"That the Mysore Housing Board Bill, 1954, be taken into consideration".

Sir, the Hon'ble the Chief Minister in his Budget speech had indicated that a Housing Board Bill would be brought before this House in order to extend the benefits of this to the poorer people, the middle class people. Sir, we have the Mysore Labour Housing Act, 1949. It confines its activities to industries only. Within that purview the other departments or the public at large have not been brought in inorder to receive the benefit. Under the Labour Housing Act, in the course of the last two years, we have been able to get substantial sums from the Government of India, to the tune of, I do not remember the exact figures, about 40 to 50 lakhs. Buildings are coming up in Bangalore, Mandya and Mysore. We are trying to help Bhadravathi also. Government strongly feels that this measure of relief should be extended to all classes in Mysore State, including the labour in industries. That is the prime object of this Bill.

Further I may point out, Sir, that in the Five-Year Plan it is envisaged that the housing conditions in India is bad. No doubt in Mysore it is much better than in other places, but still there is a large leeway to be made up. In order to satisfy ourselves that we also work the Five-Year Plan to the fullest extent possible, this Act will enable us to do that relief work. Sir, it may also be remembered that Sri N. Madhava Rao, Ex-Dewan of Mysore, presided over the Bangalore Development Committee and he also stressed the need for increasing the number of houses in order to relieve the congestion. Hence this measure has been brought before this House for its consideration and, may I say, Sir, early disposal to enable the Government to go ahead with this relief measure.

Mr. SPEAKER.—Motion moved:

"That the Mysore Housing Board Bill, 1954, be taken into consideration."

*Sri J. MOHAMED IMAM (Jagalur).—We are at an handicap because we do not know which bill is going to be placed before the House, at what time and on what date. Though copies are supplied to members, it is better that we are informed when and on what date a particular Bill is going to be taken up for consideration. We need some more time to study these Bills. I would like to know the Bills they are going to move during the course of the rest of the Session, on Monday and Tuesday.

Sri A. G. RAMACHANDRA RAO.—Sir, after all we have brought up only a few pieces of legislation and the Bills are circulated, as was pointed out by Sri Imam, on the first day itself. That does not matter. It is possible that the Hon'ble the Leader of the Opposition did not find time to study them. But, I am sure that many members have gone through the whole thing and they are ready to offer their comments. Therefore, discussion may go on and if need be, we may take it up on Monday also.

Regarding the Bills, Sri Imam wanted to know what Bills would be taken up. All the Bills have been circulated and they will be taken up unless there is any other impediment. To-day we will descuss this and also on Monday, if necessary, and the other Bill about the Mysore Cotton, Ginning and Pressing Factories Bill will be taken up on Monday. Afterwards the Mysore Land Revenue and Water Rate Bill and the Mysore Irrigation (Amendment) Bill No. 2 will be taken up in the order, till the 14th.

Mr. SPEAKER.—I think the programme is 12th and 13th for Bills including to-day.

Sri A. G. RAMACHANDRA RAO.—The Select Committee has not yet finished its work.

Sri J. MOHAMED IMAM.—Two days have to be allotted for non-official resolutions.

Mr. SPEAKER.—That we will consider. Anyhow, debate on this will not be over to-day. You may take part on Monday, but those who are ready to speak may speak now.

*ಶ್ರೀ ಎ.ಭೀಮಪ್ಪನಾಯಕ್ (ಮೊಳಕಾಲ್ಮೂರು).—ಸ್ವಾಮಿ, ಈ 1954ನೆಯ ಇಸವಿ ಮೈಸೂರು ಹೌಸಿಂಗ್ ಬೋರ್ಡು ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈಗ ಇದರಲ್ಲಿ ಅನೇಕ ಲೋಪ ದೋಷಗಳಿರುತ್ತವೆ. ಈ ಮಸೂದೆಯನ್ನು ನಾನು ಮೊದಲಿಂದ ಕೊನೆಯವರೆಗೂ ಓದಿನೋಡಿದ್ದೇನೆ. ಆದರೆ ಇದರಲ್ಲಿ ಅಡಕವಾಗಿರತಕ್ಕಂಥ ಕೆಲವು ವಿಚಾರಗಳನ್ನು ಈ ಸಭೆಯಲ್ಲಿ ಚರ್ಚೆಮಾಡತಕ್ಕದ್ದು ಅತ್ಯಗತ್ಯವಾಗಿದೆ. ಈ ಮಸೂದೆಯಿಂದ ಈಗ ಯಾರಿಗೆ ಅನುಕೂಲವಾಗಬೇಕೆಂದು ಇದನ್ನು ಉದ್ದೇಶಿಸಿ ತಯಾರಿಸಲಾಗಿದೆಯೋ ಅಂಥವರ ದೃಷ್ಟಿಯಿಂದ ಕೂಡ ಇದನ್ನು ಚರ್ಚೆಮಾಡತಕ್ಕದ್ದು ಅಗತ್ಯವಾಗಿದೆ. ಇದನ್ನು ಕೂಲಂಕಷವಾಗಿ ವಿಮರ್ಶೆಮಾಡತಕ್ಕದ್ದು ನಮ್ಮೆಲ್ಲರ ಕರ್ತವ್ಯ. ಆದರೆ ಇದರಿಂದ ಕೆಲವು ಜನರಿಗೆ ಅನುಕೂಲವಾಗುತ್ತದೆಂದು ಹೇಳುವುದರಲ್ಲಿ ಯಾವ ಅನುಮಾನವೂಇಲ್ಲ. ಈ ಮಸೂದೆಯನ್ನು ಈ ಸಭೆಯ ಮುಂದೆ ತರುವ ಮುನ್ನ ಸರ್ಕಾರದವರು ಇದನ್ನೆಲ್ಲಾ ಪರಿಶೀಲನೆಮಾಡಿ ತಂದಿದ್ದಾಗ್ಯೂ ಇದರಲ್ಲಿ ತೊಂದರೆಗಳು ಇನ್ನೂ ಬಹಳವಾಗಿವೆ. ಈ ಮಸೂದೆಯಲ್ಲಿ ಅಡಕವಾಗಿರತಕ್ಕಂಥ ಪ್ರತಿಯೊಂದು ವಿಚಾರವನ್ನೂ ಸರಿಯಾಗಿ ಸ್ಕ್ರೂಟಿನೈಜ್‌ಮಾಡಿ ನೋಡಿದ ಪಕ್ಷದಲ್ಲಿ ಇದನ್ನು ಸರ್ಕಾರದವರು ಅಷ್ಟು ಚೆನ್ನಾಗಿ ಪರಿಶೀಲನೆ ಮಾಡಿಲ್ಲವೆಂಬುದು ಕಂಡುಬರುತ್ತದೆ. ಇದರ ಧ್ಯೇಯೋದ್ದೇಶಗಳನ್ನು ಓದಿನೋಡಿದರೆ ಹಳ್ಳಿಯಲ್ಲಿರ ತಕ್ಕಂಥ ಜನರಿಗೆ ಅದರಲ್ಲೂ ಲೋಯರ್ ಮಿಡಲ್ ಕ್ಲಾಸಿನ ಜನಗಳಿಗೆ ಇದರಿಂದ ಏನೂ ಅಷ್ಟು ಪ್ರಯೋಜನವಾಗುವಂತೆ ಕಂಡುಬರುವುದಿಲ್ಲ. ಇದರಲ್ಲಿ ಕೇವಲ ಒಂದು ಸೆಕ್ಷನ್ನಿನ ನೌಕರಿಯಲ್ಲಿರತಕ್ಕ ಜನರಿಗೆ ಮಾತ್ರ ಕೊಂಚ ಅನುಕೂಲವಾಗುತ್ತದೆ. ಇನ್ನು ಇವರನ್ನು ಬಿಟ್ಟರೆ ಆ ಫ್ಯಾಕ್ಟರಿಗಳಲ್ಲಿ ಕೆಲಸಮಾಡುತ್ತಿರುವಂಥ ಒಂದು ಸೆಕ್ಷನ್ನಿನ ಜನರಿಗೆ ಸ್ವಲ್ಪ ಅನುಕೂಲವಾಗಬಹುದು. ಇವರ ಹೊರತು ಇನ್ನಾವ ರೀತಿಯಲ್ಲಿಯೂ ಮತ್ತೆ ಯಾರಿಗೂ ಇದರಿಂದ ಅನುಕೂಲವಾಗುವಹಾಗೆ ಕಂಡುಬರುತ್ತಿಲ್ಲ. ಇಂಥ ಒಂದು ಎಲ್ಲರಿಗೂ ಅನುಕೂಲಪಡಿಸತಕ್ಕಂಥ ನಿರೀಕ್ಷಣೆ ಇದರಲ್ಲಿ ಯಾವುದೂ ಕಂಡುಬರುವುದಿಲ್ಲ. ಹೀಗಿರುವಾಗ ಇದಕ್ಕೊಸ್ಕರವಾಗಿ—ಇಷ್ಟು ಮಾತ್ರ ಕೆಲಸಕ್ಕಾಗಿಯೇ ಹೀಗೊಂದು ಪ್ರತ್ಯೇಕವಾದಂಥ ಬಿಲ್ಲನ್ನು ತರಬೇಕಾಗಿದ್ದಂಥ ಅವಶ್ಯಕತೆಯೇ ಇರಲಿಲ್ಲ. ಈ ಹಿಂದೆ ಇದ್ದಂಥ ಒಂದು ಲೇಬರ್ ಹೌಸಿಂಗ್ ಎಂಬ ಆಕ್ಟ್ ಏನಿತ್ತೋ ಅದಕ್ಕೇ ಒಂದೆರಡು ತಿದ್ದುಪಡಿಗಳನ್ನು ತಂದಿದ್ದರೆ ಸಾಕಾಗುತ್ತಿತ್ತು ಎಂದು ನನಗೆ ಅನಿಸುತ್ತದೆ.

ಅಂತೂ ಈಗ ಇದರಲ್ಲಿ ಸಾರ್ವತ್ರಿಕವಾಗಿ ಎಲ್ಲರಿಗೂ ಅನುಕೂಲ ಒದಗುವುದಿಲ್ಲವೆಂಬುದಾಗಿ ತಿಳಿದು ಬರುತ್ತದೆ, ಚಿಂತೆಯಿಲ್ಲ. ಆದರೆ ಇದರಿಂದ ಹಾಗೆ ಎಲ್ಲರಿಗೂ ಒಂದು ಅನುಕೂಲವಾಗದಿದ್ದರೂ ಚಿಂತೆಯಿಲ್ಲ, ಆದರೆ ಈ ಮಸೂದೆಯಿಂದ ಇತರರಿಗೆ ಯಾವ ತೊಂದರೆಯೂ ಆಗಬಾರದು. ಈಗ ಈ ಮಸೂದೆಯನ್ನು ತರಕತ್ಯ ಉದ್ದೇಶದಿಂದ ಹಾಲಿ ದೇಶದಲ್ಲಿ ಕೆಲಸ ಮಾಡಿಕೊಂಡು ಬರುತ್ತಿರುವಂಥ ಇತರ ಅನೇಕ ಸಂಸ್ಥೆಗಳನ್ನು ಎಂದರೆ ಟೌನ್ ಮುನಿಸಿಪಾಲಿಟಿಗಳನ್ನೂ, ಸಿಟಿ ಮುನಿಸಿಪಾಲಿಟಿಗಳನ್ನೂ, ಜಿಲ್ಲಾ ಬೋರ್ಡುಗಳನ್ನೂ ಮತ್ತು ಗ್ರಾಮಪಂಚಾಯಿತಿಗಳನ್ನೂ ಮತ್ತು ಈ ಟ್ರಸ್ಟ್ ಬೋರ್ಡು ಇತ್ಯಾದಿಗಳನ್ನೆಲ್ಲಾ ಕತ್ತುಹಾಕಬೇಕೆಂದು ಹೇಳುವ ಸ್ಥಿತಿ ಬಂದಿದೆ.

ಒಬ್ಬ ಸದಸ್ಯರು.—ಆ ಜಿಲ್ಲಾ ಬೋರ್ಡುಗಳನ್ನಾಗಲೇ ಕತ್ತುಹಾಕಲಾಗಿದೆ.

ಶ್ರೀ ಎ. ಭೀಮಪ್ಪನಾಯಕ್.—ಈ ದಿವಸ ಇವರು ತಂದಿರತಕ್ಕಂಥ ಈ ಮಸೂದೆಯಲ್ಲಿ ಈ ಸ್ಥಳೀಯ ಸಂಸ್ಥೆಗಳೊಂದಿಗೆ ಸಮಾಲೋಚನೆ ನಡೆಸಿ—ಎಂದರೆ "in consultation with these Local Bodies" ಎಂಬ ಈ ಒಂದು ಫ್ರೇಜನ್ನು ಸೇರಿಸಿ ಇದನ್ನು ಈ ದಿವಸ ಒಂದು ಅಕ್ಟನ್ನಾಗಿ ಜಾರಿಗೆತಂದ ಪಕ್ಷದಲ್ಲಿ ನಾಳೆ ಬೋರ್ಡಿನವರು ಒಂದು ಡಿಕ್ಲರೇಷ್ಟ್ ಹೊರಡಿಸಿ ಯಾವ ಮುನಿಸಿಪಾಲಿಟಿಯವರನ್ನಾಗಲಿ ಅಥವಾ ಮತ್ತೆ ಯಾರನ್ನಾಗಲೀ ಹೇಳದೆ ಕೇಳದೆ ಯಾವ ರಸ್ತೆಯನ್ನು ಬೇಕಾದರೂ ಒಡೆಯಬಹುದು. ಯಾವ ರಸ್ತೆಯನ್ನು ಬೇಕಾದರೂ ಮುಚ್ಚಿಸಬಹುದು. ತಮಗೆ ಬೇಕಾದಂಥ ಕಡೆ ಒಂದು ರಸ್ತೆಯನ್ನು ತೆರೆಯಬಹುದು. ಹೀಗೆಲ್ಲಾ ಮಾಡಲು ಈ ಬೋರ್ಡಿಗೆ ಅಧಿಕಾರವಿರುತ್ತದೆ.

ಶ್ರೀ ಕೆ. ಪಟ್ಟಾಭಿರಾಮ್ (ಕೋಲಾರ).—ಈ ಮಸೂದೆಯಬಗ್ಗೆ ತಮ್ಮ ಸ್ವಾಗತ ಭಾಷಣ ಇದೆಯೇನು?

ಶ್ರೀ ಎ. ಭೀಮಪ್ಪನಾಯಕ್.—ಆದರೆ ಈಗ ನಾನು ಹೇಳುತ್ತಿರುವುದೆಲ್ಲಾ ಇದರಲ್ಲಿರತಕ್ಕಂಥ ಕೆಲವು ಲೋಪದೋಷಗಳನ್ನು ತಿಳಿಸುತ್ತ ಅವುಗಳಿಂದ ಆಗಬಹುದಾದ ತೊಂದರೆಗಳನ್ನು ನಿವಾರಣೆ ಮಾಡತಕ್ಕ ಬಗ್ಗೆ ಮುಂದೇನು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವುಗಳನ್ನು ಕೈಗೊಳ್ಳುವಂತೆ ಮಾಡಬೇಕೆಂಬ ಉದ್ದೇಶದಿಂದ ಇವುಗಳನ್ನೆಲ್ಲಾ ತಿಳಿಸುತ್ತಿದ್ದೇನೆ. ಈಗ ಈ ಮಸೂದೆಯ ಉದ್ದೇಶಗಳನ್ನು ಈಡೇರಿಸತಕ್ಕ ಬಗ್ಗೆ ಒಂದು ಬೋರ್ಡನ್ನು constitute ಮಾಡಬೇಕೆಂದು ಹೀಗೆ ಹೇಳಿದ್ದಾರೆ: "The Board shall consist of the Chairman and six other members appointed by the State Government" ಎಂದು ಹೇಳಿದ್ದಾರೆ. ಹೀಗೆ ಹೇಳಿರುವುದರಿಂದ ಇದರಲ್ಲಿ ಯಾವುದನ್ನೂ ಒಂದು ನಿರ್ದಿಷ್ಟವಾದ ರೀತಿಯಲ್ಲಿ ತಿಳಿಸಿರುವುದಿಲ್ಲ. ಹೀಗೆ ಆರು ಜನರನ್ನು ಸೇರಿಸಿ ಬೋರ್ಡನ್ನು ರಚಿಸಬೇಕೆಂದು ಹೇಳಿರುವಾಗ—ಇದನ್ನು ಇನ್ನೂ ನಿರ್ದಿಷ್ಟಗೊಳಿಸಿ ಆ ಆರು ಜನಗಳ ಹೆಸ್ಕಿಕೆ ಮೂರು ಜನರು ಈ ಶಾಸನಸಭೆಗಳಿಗೆ ಸಂಬಂಧಪಟ್ಟಿರುವಂತೆಯೋ ಮತ್ತು ಇನ್ನುಳಿಯತಕ್ಕ ಮೂವರಲ್ಲಿ ಒಬ್ಬರನ್ನು ಈ ಬೆಂಗಳೂರು ಸಿಟಿ ಕಾರ್ಪೊರೇಷನ್ನಿನಿಂದ ತೆಗೆದುಕೊಳ್ಳಬೇಕೆಂಬೋ ಮತ್ತು ಇನ್ನಿಬ್ಬರನ್ನು ಸಾರ್ವಜನಿಕ ಮುಖಂಡರ ಹೆಸ್ಕಿಕೆ ಯಾರನ್ನಾದರೂ ತೆಗೆದುಕೊಳ್ಳಲಾಗುತ್ತದೆಂತಲೋ ಹೀಗೆ ಒಂದು ರೀತಿ ಹೇಳಿದ್ದರೆ ಚೆನ್ನಾಗಿತ್ತು. ಆದರೆ ಹಾಗೆ ಯಾವುದನ್ನೂ ನಿರ್ದಿಷ್ಟವಾಗಿ ಹೇಳದೆ ನುಮ್ಮನೆ ಸರ್ಕಾರದವರು ಮುಗುಂ ಆಗಿ ಆರು ಜನಗಳನ್ನು ನೇಮಕಮಾಡಬೇಕೆಂದು ಹೇಳಿರುವುದರಿಂದ ನಾಳೆ ಶ್ರೀಮಾನ್ ಕೆ. ಪಟ್ಟಾಭಿರಾಮ್‌ರವರೇ—ಏನೋ ಹೀಗೆ ಒಂದು ಅಕ್ಟನ್ನು ಜಾರಿಗೆತಂದು ಅವರ ಪಾರ್ಟಿಯ ಹೆಸ್ಕಿಕೆಯಲ್ಲೇ ಯಾರಿಗೋ ಆರು ಜನಗಳಿಗೆ ಹೀಗೊಂದು ಅನು

ಕೂಲ ಮಾಡಬೇಕೆಂಬ ಉದ್ದೇಶದಿಂದಲೇ ಇದನ್ನು ತಂದಿರುತ್ತಾರೆಂದು ಹೇಳುವುದಕ್ಕೆ ಈಗ ಅವಕಾಶ ವಿದೆ. ಹಾಗೆ ಹೇಳಲು ಒಂದು ಅವಕಾಶವಿರಬಾರದು ಎಂಬ ದೃಷ್ಟಿಯಿಂದ ನಾನೀಗ ಇದೆಲ್ಲವನ್ನೂ ಹೇಳುತ್ತಿದ್ದೇನೆ. ಅಷ್ಟೇ ಹೊರತು ನಾನು ಈ ಮಸೂದೆಯನ್ನು ಸ್ವಾಗತಮಾಡುತ್ತೇನೆಂದು ಹೇಳಿದಾಕ್ಷಣಕ್ಕೇ ಇದರಲ್ಲಿರತಕ್ಕ ತೊಂದರೆಗಳನ್ನು ನಿವಾರಣೆಮಾಡ ಬೇಕೆಂದು ಹೇಳುವುದೇ ಬೇಡವೇ! ಹೀಗೆ ಈ ಮಸೂದೆಯಲ್ಲಿ ಸೂಚನೆಮಾಡಬೇಕಾಗಿರತಕ್ಕಂಥ ವಿಷಯಗಳು ಅನೇಕವಾಗಿರುತ್ತವೆ. ಈಗ ಈ ಮಸೂದೆಯ ಧ್ಯೇಯೋದ್ದೇಶದಲ್ಲಿ ಹೇಳಿರತಕ್ಕದ್ದನ್ನು ನೋಡಿದರೆ ಈ ಹಿಂದೆ ಈ ಕಾರ್ಮಿಕೋದ್ಯೋಗಿಗಳಿಗೆ ಇದ್ದಂಥ ವಸತಿಗೃಹಗಳ ತೊಂದರೆಯನ್ನು ತಪ್ಪಿಸುತ್ತೇವೆಂದು ಲೇಬರ್ ಹೌಸಿಂಗ್ ಆಕ್ಟ್ ಎಂಬುದಾಗಿ ಯಾವುದನ್ನು ಘೋಷಿಸಲಾಗಿತ್ತೋ ಈ ದಿವಸ ಅದನ್ನು ಬದಲಾಯಿಸಿ ಆ ಉದ್ದೇಶಗಳನ್ನೂ ಒಳಗೊಂಡಿರತಕ್ಕಂಥ ಈ ಒಂದು ಮೈಸೂರ್ ಹೌಸಿಂಗ್ ಬೋರ್ಡ್ ಎಂಬುದನ್ನು ರಚಿಸಿ ಈಗ ಸಭೆಯ ಮುಂದೆ ಇಟ್ಟಿದ್ದಾರೆಂದು ಗೊತ್ತಾಗುತ್ತದೆ. ಇದಕ್ಕೆ ಹಿಂದೆಯೇ ಈ ವಿಧವಾದ ಅನುಕೂಲತೆಗಳನ್ನು ಕಲ್ಪಿಸಿಕೊಡತಕ್ಕ ಬಗ್ಗೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡುಗಳನ್ನು ಬೇರೆ ರಚಿಸಲಾಗಿರುತ್ತದೆ. ಆ ಸಂಸ್ಥೆಗಳೂ ಸಹ ಈ ದಿವಸ ಇದ್ದು ಕೆಲಸಕಾರ್ಯಗಳನ್ನು ನಡೆಸಿಕೊಂಡುಬರುತ್ತಿವೆ. ಆದರೆ ಮತ್ತೆ ಕೆಲವು ಮುನಿಸಿಪಾಲಿಟಿಗಳೂ ಸಹ ಇದೇ ರೀತಿಯ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬರುತ್ತಿವೆ. ಹೀಗೆಲ್ಲಾ ಅವುಗಳು ಈ ದಿವಸ ಕೆಲಸಮಾಡಿಕೊಂಡು ಬರುತ್ತಿರುವಾಗ, ಈ ದಿವಸ ನಾವು ಹೊಸದಾಗಿ ರಚಿಸತಕ್ಕಂಥ ಈ ಒಂದು ಹೊಸ ಸಂಸ್ಥೆಗೂ ಮತ್ತು ಈಗಾಗಲೇ ಏರ್ಪಡಿಸಿರತಕ್ಕಂಥ ಆ ಬೇರೆ ಸಂಸ್ಥೆಗಳಿಗೂ ಯಾವುದಾದರೊಂದು ಸಂಬಂಧ ಇರಬೇಕೋ ಅಥವಾ ಬೇಡವೋ ಎಂಬುದೊಂದನ್ನು ಇದರಲ್ಲಿ ಸೂಚಿಸಿಲ್ಲ. ಈ ದಿವಸ ಯಾವ ಮುನಿಸಿಪಾಲಿಟಿಗಾಗಲಿ ಅಥವಾ ಮತ್ತೆ ಯಾವುದೇ ಒಂದು ಸ್ಥಳೀಯ ಸಂಸ್ಥೆಗೆ ಸೇರಿರುವಂಥ ನಿವೇಶನವನ್ನು ಅಕ್ವಯರ್‌ಮಾಡಿಕೊಳ್ಳಬೇಕಾಗಿದ್ದರೆ ಅವರೂ ಮತ್ತು ಈ ಹೊಸ ಸಂಸ್ಥೆಯೂ ಒಂದು ಕಡೆ ಸೇರಿ ಆ ಬಗ್ಗೆ ಒಂದು ತೀರ್ಮಾನಕ್ಕೆ ಬರುವುದು ಬೇಡವೇ?

ಇನ್ನೂ ಒಂದು ವಿಚಾರ ತಿಳಿಸಿದ್ದಾರೆ—ಈ ಸ್ಥಳೀಯ ಸಂಸ್ಥೆಗಳು ಬೆಟರ್‌ಮೆಂಟ್ ಫೀಜನ್ನು ಬೇರೆ ಕೊಡಬೇಕಾಗಿದೆಯೆಂದು ತಿಳಿಸಿದ್ದಾರೆ. ನಾಳೆ ಈ ಹೌಸಿಂಗ್ ಬೋರ್ಡಿನವರು ತಮ್ಮ ಕಾರ್ಯಾಚರಣೆಯನ್ನು ಪ್ರಾರಂಭಿಸಿದನಂತರ ಯಾವುದೋ ಒಂದು ಮುನಿಸಿಪಲ್ ಪ್ರದೇಶದಲ್ಲಿ ಒಂದು ವಿಮಾನ ನಿರ್ಮಾಣವನ್ನು ಸ್ಥಾಪನೆ ಮಾಡಬೇಕೆಂದೋ ಅಥವಾ ಯಾವುದೋ ಕಡೆ ಒಂದು ಓರಿಯಂಟಲ್ ಬಿಲ್ಡಿಂಗನ್ನು ಎಂದರೆ 'ಚಂದೀಗರ್' ಎಂಬತಕ್ಕಂಥ ಕಟ್ಟಡಗಳನ್ನು ಕಟ್ಟಿಸಬೇಕೆಂದೋ ಅಥವಾ ಒಂದು ಅಂಡರ್ ಗ್ರೌಂಡ್ ಡ್ರೈನೇಜ್ ಮಾಡಬೇಕೆಂತಲೋ ಅಥವಾ ಯಾವುದೋ ಒಂದು ಪಾರ್ಕಿನಲ್ಲಿ ಒಂದು ಆರ್ನಮೆಂಟಲ್ ಲೈಟುಗಳನ್ನು ಹಾಕಿಸಬೇಕೆಂತಲೋ ಉದ್ದೇಶಿಸಿ ಹಾಗೆ improve ಮಾಡಿದಂಥ ಪ್ರದೇಶಗಳಿಗೆ ಚದುರಗಜ ಒಂದಕ್ಕೆ 53–8–6 ರೂ. ಬೆಲೆಯಾಗುತ್ತದೆಂದೂ ಹೇಳುವುದಾದರೆ—ಆಗ ಆ ಪ್ರದೇಶದ ಆಡಳಿತವನ್ನು ವಹಿಸತಕ್ಕಂಥ ಮುನಿಸಿಪಾಲಿಟಿಗೆ ಅಷ್ಟೊಂದು ಕೊಡತಕ್ಕ ಚೈತನ್ಯ ಇರುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಹಾಗೆ ಖರ್ಚು ಮಾಡುವ ಮುನ್ನು ಯೋಚನೆ ಮಾಡುವುದು ಬೇಡವೇ? ಅಥವಾ ಈ ಹೌಸಿಂಗ್ ಬೋರ್ಡಿನವರು ತಾವು ಅಭಿವೃದ್ಧಿಪಡಿಸಿದಂಥ ಒಂದು ಪ್ರದೇಶದ ಆಜು ಬಾಜು ಪ್ರದೇಶಗಳಿಗೆ ಹೀಗೆ ಅಭಿವೃದ್ಧಿಪಡಿಸಿದ್ದರಿಂದ ಸ್ವಲ್ಪ ಹೆಚ್ಚು ಬೆಲೆ ಬರುವಂತಾದರೆ ಆಗ ಅವರೂ ಸಹ ಈ ಬೆಟರ್‌ಮೆಂಟ್ ಫೀಜನ್ನು ಕೊಡಬೇಕೆಂದು ಕೇಳುವುದಕ್ಕಾಗುತ್ತದೆಯೇ? ಅಥವಾ ಅವರಿಗೆ ಒಂದು ಹೆಚ್ಚಿನ ತೆರಿಗೆ ಹಾಕುವುದಕ್ಕೆ ಸಾಧ್ಯವಿದೆಯೇ? ಹೀಗೆ ಈ ಬೋರ್ಡಿನವರು ತಮಗೆ ಸೇರಿರತಕ್ಕಂಥ ನಿವೇಶನದಲ್ಲಿ ಒಂದು ರೈಲ್ವೆ ನಿಲ್ದಾಣವನ್ನೋ ಅಥವಾ ಒಂದು children parkನ್ನೋ ಏರ್ಪಾಡು ಮಾಡುವುದರಿಂದ ಆ ಪಕ್ಕದ ಪ್ರದೇಶ ಯಾವ ಒಂದು ಮುನಿಸಿಪಾಲಿಟಿಗಾದರೂ ಸೇರಿದ್ದರೆ ಆಗ ಆ ಮುನಿಸಿಪಲ್ ನರಹದ್ದಿನೊಳಗಿರತಕ್ಕಂಥ ಮನೆಮಠಗಳಿಗೆ ಒಂದು ಹೆಚ್ಚಿನ ಬೆಲೆ ಬಂದಿತೆಂದು ಆಗ ಆ ಮುನಿಸಿಪಾಲಿಟಿಯವರಿಗೆ 'ನೀವು ಒಂದು ಬೆಟರ್‌ಮೆಂಟ್ ಫೀಜನ್ನು ಕೊಡಿ' ಎಂಬುದಾಗಿ ಕೇಳುವುದಕ್ಕಾಗುತ್ತದೆಯೇ? ಅಥವಾ ಆ ಮುನಿಸಿಪಾಲಿಟಿಗೆ ಅದನ್ನು ಕೊಡುವುದಕ್ಕಾದರೂ ಸಾಧ್ಯವಿದೆಯೆ? ಅಥವಾ ಯಾವುದಾದರೂ ಒಂದು ಮುನಿಸಿಪಾಲಿಟಿ ಆಷ್ಟು ಪ್ರಾಬಲ್ಯವಿಲ್ಲದುದಾಗಿದ್ದರೆ ಅದಕ್ಕೆ ಸೇರಿರುವಂಥ ಕೆಲವು ಕಟ್ಟಡಗಳು ಇತ್ಯಾದಿಗಳನ್ನು ಒಡೆದು ಹಾಕಿದರೂ ಹಾಕಬಹುದು. ಇಂಥ ಕಾರ್ಯಕ್ರೀಟ್ ನಿದರ್ಶನಗಳೂ ಕೂಡ ಬೇಕಾದಷ್ಟಿರುತ್ತವೆ.

ಇನ್ನು ಟ್ರಿಬ್ಯುನಲ್ ಎಂದು ಒಂದು ವಿಚಾರ ತಿಳಿಸಿದ್ದಾರೆ. ಆದರೆ ನಾನು ಇಲ್ಲಿಯವರೆಗೂ ತಿಳಿದುಕೊಂಡಿದ್ದಂತೆ "ಟ್ರಿಬ್ಯುನಲ್" ಎಂದರೆ ಮೂರು ಜನ ಗಳಿದ್ದರೇನೇ ಅದೊಂದು ಟ್ರಿಬ್ಯುನಲ್ ಆಗುತ್ತದೆ—ಇಲ್ಲದಿದ್ದರೆ ಅದು ಟ್ರಿಬ್ಯುನಲ್ ಎಂದು ಹೇಳುವುದಕ್ಕಾಗುವುದಿಲ್ಲವೆಂದು ನಾನು ಭಾವಿಸಿಕೊಂಡಿದ್ದೆ. ಆ ಪದದ ಜೋಡಣೆಕೆಯನ್ನು ನೋಡುವುದಾದರೂ ಆ 'ಟ್ರೈ' ಎಂಬ ಶಬ್ದಕ್ಕೆ 'ಮೂರು' ಎಂದು ಅರ್ಥವಾಗುತ್ತದೆ. ಆದುದರಿಂದ ಒಂದು "ಟ್ರಿಬ್ಯುನಲ್" ಆಗಬೇಕೆಂದರೆ ಅದರಲ್ಲಿ ಮೂರು ಜನಗಳು ಇದ್ದೇ ತೀರಬೇಕೆಂದು ಗೋಚರವಾಗುತ್ತದೆ. ಆದರೆ ಈಗ ಇಲ್ಲಿ ಹೇಳಿರತಕ್ಕದ್ದನ್ನು ನೋಡಿದರೆ: "The Tribunal shall be the District Judge having jurisdiction in the area concerned" ಎಂಬುದಾಗಿ ಹೇಳಿದ್ದಾರೆ. ಸರ್ವಸಾಧಾರಣವಾಗಿ ಒಂದು ಹಳ್ಳಿಯಲ್ಲಿರತಕ್ಕಂಥ ಯಾವುದಾದರೂ ಒಂದು ಜಪ್ತಿಯಾನನ್ನು ಅಕ್ವಯರ್ ಮಾಡಿಕೊಳ್ಳಬೇಕೆಂಬ ಪ್ರಸಂಗ ಬಂದಾಗ ಅದರ ಬೆಲೆ ಇತ್ಯಾದಿ ಇನ್ನೂ ಅನೇಕ ವಿಚಾರಗಳ ಬಗ್ಗೆ ಹೈ ಕೋರ್ಟಿನವರೆಗೂ ವ್ಯಾಜ್ಯಗಳು ನಡೆದಿರತಕ್ಕಂಥ ನಿದರ್ಶನಗಳು ವಿಶೇಷವಾಗಿವೆ; ಮತ್ತು ಹಾಗೆ ಹೈ ಕೋರ್ಟಿನವರೆಗೂ ಹೋಗುವುದಕ್ಕೆ ಪ್ರತಿಯೊಬ್ಬರಿಗೂ ಕಾನೂನಿನಲ್ಲೇ ಅವಕಾಶ ಮಾಡಿಕೊಡಲಾಗಿದೆ.

> "No Court shall enquire into the order of the Tribunal as regards compensation to be paid."

ಇವರಿಗೇಕೆ ಅಂಥ ಪವರ್ಸ್ ಇಪೆ? ಆದರೆ ಇಲ್ಲಿಯವರೆಗೂ ಹೇಳಿರತಕ್ಕದ್ದನ್ನು ನೋಡಿದರೆ ಈ ವ್ಯವಹಾರಗಳಿಗೆಲ್ಲಾ ಈ ಡಿಸ್ಪ್ಯೂಟ್ಸ್ ಜಡ್ಜಿಗಳ ತೀರ್ಮಾನವೇ ಆಖೈರು ತೀರ್ಮಾನವೆಂದು ಹೇಳಿದ್ದಾರೆ. ಹೀಗೆ ಅವರು ಕೊಡತಕ್ಕಂಥ ತೀರ್ಮಾನವನ್ನು shall not be questioned in any Court of law ಎಂದು ಹೇಳಿದ್ದಾರೆ. ಆದರೆ ಒಂದು ಸ್ಥಿತಿನ ಕ್ರಯ

(ಶ್ರೀ ಎ. ಭೀಮಪ್ಪನಾಯಕ್.)

ವಿಕ್ರಯ ಅಥವಾ ಅದನ್ನು ಪರಭಾರೆ ಮಾಡತಕ್ಕದ್ದು ಅಥವಾ ದರ, ಬೆರೆ ಹೆಚ್ಚಾಯಿತು ಅಥವಾ ಕಡಮೆಯಾಯಿತು ಎಂಬತಕ್ಕ ವಿಚಾರಗಳಲ್ಲಿ ವಿವಾದ ಬಂದಾಗ ಅದನ್ನು ಆಖೈರು ತೀರ್ಮಾನ ಮಾಡತಕ್ಕದ್ದು ಕೋರ್ಟಿಗೆ ಸೇರಿದಂಥ ವಿಚಾರವಾಗಿರುತ್ತದೆ. ಆದುದರಿಂದ ಈ ವಿಚಾರದಲ್ಲಿ ಸೂಕ್ತ ರೀತಿಯಲ್ಲಿ ಈ ಮಸೂದೆಗೆ ತಿದ್ದುಪಡಿಗಳನ್ನು ಮಾಡುವುದು ಅವಶ್ಯಕವಾಗಿದೆ.

ಇಷ್ಟೇ ಅಲ್ಲದೆ ಈ ಮಸೂದೆಯಲ್ಲಿ ಈಗ ಕೂಲಿಗಾರರಿಗೂ ಮತ್ತು ಸರ್ಕಾರಿ ನೌಕರರುಗಳಿಗೂ ತೊಂದರೆ ಮಾಡಲು ಕೆಲವು ಕಡೆ ಅವಕಾಶವಿದೆ. ಕೆಲವರಿಗೆ ಬಾಡಿಗೆಗಾಗಿ ಕೊಟ್ಟಿರತಕ್ಕ ಕಡೆಗಳಲ್ಲಿ ಅವರು ಸರಿಯಾಗಿ ಬಾಡಿಗೆಯನ್ನು ಕೊಟ್ಟುಕೊಂಡು ಹೋಗದೆ ತಪ್ಪಿತಸ್ಥರಾದ ಪಕ್ಷದಲ್ಲಿ ಅಂಥವರಿಗೆ ಮೊದಲು ಒಂದು ನೋಟೀಸನ್ನು ಕೊಡಬೇಕೆಂದೂ ಹಾಗೆ ನೋಟೀಸ್ ಕೊಟ್ಟ ತರುವಾಯ ಯಾರು ಎರಡು ತಿಂಗಳ ಬಾಡಿಗೆಯನ್ನು ಕೊಡದಂತೆ ತಪ್ಪಿತಸ್ಥರಾಗಿರುತ್ತಾರೋ ಅಂಥವರು ಆ ನೋಟೀಸ್ ಜಾರಿಯಾದ ಒಂದು ತಿಂಗಳೊಳಗಾಗಿ ಆ ಬಾಕಿ ನಿಂತಿರತಕ್ಕ ಬಾಡಿಗೆಯನ್ನೆಲ್ಲಾ ಪಾವತಿಮಾಡದೆ ಹೋದಪಕ್ಷದಲ್ಲಿ ಅಂಥವರನ್ನು ಜುಲುಂನಿಂದ ಆಚೆಗೆ ಹಾಕಬೇಕೆಂದೂ ಹೇಳಲಾಗಿದೆ. 'By force' ಎಂಬ ಪದಗಳನ್ನು ಇಲ್ಲಿ ಉಪಯೋಗಿಸಿದ್ದಾರೆ. ಮೊದಲನೆಯದಾಗಿ ಒಂದು ತಿಂಗಳಿಗೆ ಮುಂಚಿತವಾಗಿ ಒಂದು ನೋಟೀಸನ್ನು ಮಾತ್ರ ಕೊಡಬೇಕೆಂದು ಹೇಳಿದ್ದಾರೆ.

> "If any person refuses or fails to vacate the house, the competent authority may use sufficient force to remove him from the premises."

Force ಉಪಯೋಗಿಸಿ ರಿಮೂವ್ ಮಾಡಿದರೆ ಅದು excess force ಆಗಿದ್ದರೆ ನಾವು ಏನೂ ಮಾಡುವ ಹಾಗಿಲ್ಲ.

No court shall have jurisdiction to try this case and no court shall entertain any complaint in order to ascertain what amount of force is used.

ಇಂಥಾದ್ದನ್ನೆಲ್ಲಾ ಈಗ ಸರಿಪಡಿಸಬೇಕಾಗಿದೆ. ಆದರೆ ನಾನು ಈ ಮಸೂದೆಯನ್ನು ಸ್ವಾಗತಮಾಡುತ್ತೇನೆಂಬ ದೃಷ್ಟಿಯಿಂದಲೇ ಈ ಅಂಶಗಳನ್ನೆಲ್ಲಾ ಸರಿಪಡಿಸಬೇಕೆಂದು ಹೇಳುತ್ತಿದ್ದೇನೆ. ಈಗ ಇನ್ನೂ ಹೊರಗಡೆಯಲ್ಲಿ ಇದೇ ರೀತಿ ಹೌಸಿಂಗ್ ಬೋರ್ಡುಗಳು ಅನೇಕವಾಗಿವೆ. ಕೆಲವು ಪ್ರೈವೇಟ್ ಸೊಸೈಟಿಗಳವರೂ ಸಹ ಈ ಕೆಲಸವನ್ನು ಕೈಗೊಂಡಿದ್ದಾರೆ. ಅವರೆಲ್ಲಾ ಮನೆಗಳನ್ನು ಕಟ್ಟಿಕೊಳ್ಳುವಂಥವರಿಗೆ ಮೂರು ವರ್ಷ ಅಥವಾ ಆರು ವರ್ಷದ ಕಂತುಗಳ ಮೇಲೆ ಹಣವನ್ನು ಸಾಲ ಕೊಡುತ್ತಿದ್ದಾರೆ. ಆದರೆ ಅವರು ಹಾಗೆ ಕೊಡತಕ್ಕ ಸಾಲಕ್ಕೆ ಸ್ವಲ್ಪ ಜಾಸ್ತಿ ಬಡ್ಡಿ ಹಾಕಬಹುದು. ಆದರೆ ತಾವು ಈಗ ಈ ಸ್ಕೀಮು ಪ್ರಕಾರ ಎಷ್ಟು ಬಡ್ಡಿ ಹಾಕುತ್ತೀರಿ ಜನರಿಗೆ ಯಾವ ರೀತಿ ಅನುಕೂಲ ಮಾಡಿಕೊಡುತ್ತೀರಿ ಅಥವಾ ತಾವು ಕಟ್ಟಿಸತಕ್ಕಂಥ ಮನೆಗಳನ್ನೆಲ್ಲಾ ಅವರಿಗೇ ಖರೀದಿಗೆ ಕೊಡುವುದೇ ಅಥವಾ ಕೇವಲ ಬಾಡಿಗೆಗಾಗಿ ಕಟ್ಟಿಸಿ ಕೊಡುವುದೇ ಇತ್ಯಾದಿ ಯಾವುದೂ ಇದರಲ್ಲಿ ಸರಿಯಾಗಿ ಗೊತ್ತಾಗುತ್ತಿಲ್ಲ. ಇದನ್ನೆಲ್ಲಾ ಯೋಚನೆ ಮಾಡಬೇಕಾಗಿದೆ. ಹೀಗೆ ಯಾರಾದರೂ ಖಾಸಗೀಯವರೊಬ್ಬರು ಬಂದು "ಸ್ವಾಮಿ, ನಮ್ಮ ಊರಿನಲ್ಲಿ ಒಂದು ದೊಡ್ಡ ಟ್ಯಾನಿಂಗ್ ಫ್ಯಾಕ್ಟರಿಯನ್ನು ಪ್ರಾರಂಭಿಸಬೇಕೆಂದಿದ್ದೇವೆ, ಅಲ್ಲಿ ಜನರ ಜೀವನೋಪಾಯಕ್ಕೆ ತೊಂದರೆಯಿದೆ, ಅಲ್ಲಿನ ಜನರ ಜೀವನೋಪಾಯಕ್ಕಾಗಿ ಒಂದು ಕೈಗಾರಿಕೆ ಪ್ರಾರಂಭಿಸಬೇಕೆಂದಿರುತ್ತೇವೆ, ಅದಕ್ಕೆ ತಾವು ನಮಗೊಂದು ಕಟ್ಟಡವನ್ನು ಕಟ್ಟಿಸಿಕೊಡಿ" ಎಂದು ಬಂದು ಕೇಳಿದರೆ ತಾವು ಅವರಿಗೂ ಕೂಡ ಒಂದು ರೀತಿಯಲ್ಲಿ ಅಲ್ಲಿ ಜಮೀನುಗಳನ್ನು ಅಕ್ವಯರ್ ಮಾಡಿಕೊಂಡು, ಅವರಿಗೆ ಸಾಲವನ್ನಾದರೂ ಕೊಟ್ಟು ಅಥವಾ ಒಂದು ಭಾಗವನ್ನು ಸಬ್‌ಸಿಡೈಜ್ ಮಾಡಿಕೊಡುತ್ತೇವೆಂದು ತಾವೇನೂ ಇದರಲ್ಲಿ ಹೇಳಿಲ್ಲ. ಆದರೆ ಇಂಥ ವಿಚಾರಗಳಲ್ಲಿ ಎಲ್ಲಾ ಯಜಮಾನಿಕೆಗಳನ್ನು ಬೇಕಾದರೂ ನಿಮಗೇ ಬಿಟ್ಟುಕೊಡಬಹುದು. ಆದರೆ ನೀವು ಇಂಥ ವಿಚಾರಗಳನ್ನೇನಾದರೂ ಇದರಲ್ಲಿ ತಿಳಿಸಿದ್ದೀರಾ?

11-30 A.M.

This applies only where the Board is the *yajaman*. ಅದು ಬಿಟ್ಟು ಇನ್ನು ಯಾವುದಕ್ಕೂ ಇದು ಅನ್ವಯಿಸುವುದಿಲ್ಲ. ಆದ್ದರಿಂದ, ನಾನು ಹೇಳುವುದು, ಇದನ್ನು ತಾವು ಸೂಕ್ತವಾಗಿ ಬದಲಾವಣೆ ಮಾಡಿದರೆ ಮಾತ್ರ ಇದು ಸ್ವಾಗತಾರ್ಹ. ಈಗಿರುವ ರೀತಿಯಲ್ಲಿ ಒಂದೊಂದು ಸೆಕ್ಷನ್ನನ್ನೂ ಕೂಡ ಮೊದಲಿಂದ ಕೊನೆಯವರೆಗೂ ನಾನು ನೋಡುತ್ತಾ ಹೋಗಿದ್ದೇನೆ. ಎಲ್ಲಿಯೂ ಕೂಡ private housingನ್ನು ಉತ್ತೇಜನಗೊಳಿಸುವುದಕ್ಕೆ ಅವಕಾಶಮಾಡಿಲ್ಲ. ಏನಿದ್ದರೂ ಸರ್ಕಾರಿ ನೌಕರರು, ಲೋಕಲ್ ಬೋರ್ಡಿನವರನ್ನು ಮಾತ್ರ ಗಣನೆಗೆ ತೆಗೆದುಕೊಂಡಿದ್ದಾರೆ. ಅದರಲ್ಲೂ ಸಂಸ್ಥಾನದ ನೌಕರರಿಗೆ ಮಾತ್ರ; ಕೇಂದ್ರ ಸರ್ಕಾರದ ನೌಕರರು ಎಷ್ಟು ಜನರಿದ್ದರೂ ಅವರಿಗೂ ಇಲ್ಲಿ ಅವಕಾಶವಿಲ್ಲ. ಬಹುಶಃ ಸೆಲೆಕ್ಟ್ ಕಮಿಟಿಗೆ ಹೋದಾಗ ಇದೆಲ್ಲಾ ಸರಿಹೋಗಬಹುದು. ಇದರಲ್ಲಿ ಅನುಕೂಲತೆಗಳನ್ನು ಕಲ್ಪಿಸಿರುವಂಥದು ಸರ್ವರಿಗೂ ಒದಗುವ ಹಾಗಾಗಬೇಕು.

ಅಲ್ಲದೆ, ಇನ್ನೊಂದು ವಿಷಯ. ಈಗ ನಮ್ಮ ಸರ್ಕಾರದವರು ಇದೇ ಮನೆಗಳನ್ನು ಕಟ್ಟುವುದಕ್ಕೆಂದೇ ಹೌಸ್ ಬಿಲ್ಡಿಂಗ್ ಕಾರ್ಪೊರೇಷನ್, ಟ್ರಸ್ಟ್‌ಬೋರ್ಡ್ ಎಂದು ಸಂಸ್ಥೆಗಳನ್ನು ಏರ್ಪಡಿಸಿ ಏಳೆಂಟು ಲಕ್ಷ ರೂಪಾಯಿಗಳನ್ನು ಅದಕ್ಕೆ ಒದಗಿಸಿದ್ದಾರೆ. ಅದಿದ್ದಮೇಲೆ ಇದರ ಅಗತ್ಯವಾದರೂ ಏನು? ಎಂಬ ಪ್ರಶ್ನೆ ಬರುತ್ತದೆ. ಒಂದುವೇಳೆ ಟ್ರಸ್ಟ್‌ಬೋರ್ಡ್ ಮುಂತಾದುವು ಸಾರ್ವಜನಿಕರಿಗೆ ಸಹಾಯಮಾಡುವುದಕ್ಕೆ ಇವೆ, ಇದು ಬರೀ ಕೂಲಿಗಾರರಿಗೆ, ಸರ್ಕಾರಿ ನೌಕರರಿಗೆ ಸಹಾಯಮಾಡುವುದಕ್ಕಿದೆಯೆಂದು ಹೇಳುವುದಾದರೆ, ಈಗಿರುವ ಆಕ್ಟಿನಲ್ಲೇ ಆ ಪ್ರಕಾರ ಒಂದು ತಿದ್ದುಪಡಿಯನ್ನು ತಂದರೆ ಆಗುವುದಿಲ್ಲವೇ? ಹಾಗೂ ಮಾಡಿಲ್ಲ. ಈಗ ಅದನ್ನೂ ಉಳಿಸಿಕೊಳ್ಳುತ್ತೀರಿ; ಟ್ರಸ್ಟ್‌ಬೋರ್ಡ್ ಆಕ್ಟೂ ಇದೆ; ಕೋ-ಆಪರೇಟಿವ್ ಹೌಸಿಂಗ್ ಆಕ್ಟೂ ಇದೆ! ಅವುಗಳ ಜೊತೆಗೆ ಇದೂ ಸಾರ್ವಜನಿಕರ ಅನುಕೂಲಕ್ಕಾಗಿ ಇದೆಯೆಂದು ಹೇಳುವುದಾದರೆ ಈ ಆಕ್ಟಿನಲ್ಲಿ ಬಹಳಮಟ್ಟಿನ ಬದಲಾವಣೆಗಳನ್ನು ಆ ದೃಷ್ಟಿಯಿಂದ ಮಾಡಬೇಕಾಗಿ ಬರುತ್ತದೆ; ಇನ್ನೂ ಅನೇಕ ವಿಷಯಗಳನ್ನು ಸೇರಿಸಬೇಕಾಗುತ್ತದೆ. ಸಾರ್ವಜನಿಕರಿಗೆ ಸಾಲಕೊಡುವುದು ಹೇಗೆ ಎಂಬುದನ್ನು ನಿರ್ಧರಿಸಬೇಕು. ಏಕೆಂದರೆ, ಇದೇ ಸಂದರ್ಭದಲ್ಲಿ, ಕೋ-ಆಪರೇಟಿವ್ ಸಂಸ್ಥೆಗಳೂ, Public limited company ಗಳೂ ಕೆಲಸಮಾಡುತ್ತವೆ

ಯೆಂಬುದನ್ನು ನಾವು ನೋಡಬೇಕು. ಒಂದುವೇಳೆ ಕೂಲಿಗಾರರಿಗೆ ಮಾತ್ರ ಎಂದು ಹೇಳಿ ಒಂದು ಪ್ರದೇಶವನ್ನು ಅಕ್ವೈರ್‌ಮಾಡಿ ಮನೆ ಕಟ್ಟಲೆಂದು ಸಾಲ ಕೊಟ್ಟರೆ, ಅವರಿಗೆ ಅದರಿಂದೇನಾದರೂ ಸುಲಭ ಬಾಡಿಗೆಯಮೇಲೆ ಸಿಕ್ಕುವಹಾಗೆ ಮಾಡುತ್ತೀರಾ? 'ನಾವು ಕೊಡುವುದನ್ನು ನಬ್ಬುಡಿಯಾಗಿ ಕೊಡುತ್ತೇವೆ, ಶೇಕಡ 5ರಂತೆ ಬಡ್ಡಿಯನ್ನು ಆ ಚೆನೆಂಟುಗಳಿಂದ ತೆಗೆದು ಕೊಳ್ಳುವುದಕ್ಕೆ ಬದಲಾಗಿ ಶೇಕಡ 1ರಂತೆ ತೆಗೆದು ಕೊಳ್ಳುತ್ತೇವೆ' ಎಂದು ಹೇಳಬಹುದು. ಅಂಥ ರೀತಿಯಲ್ಲಿ ಇದರಲ್ಲಿ ಸಹಾಯಮಾಡುವುದಕ್ಕೇನೋ ಇದರಲ್ಲಿ ಅವಕಾಶವಿದೆ. ಆದರೂ ಕೂಡ ಒಟ್ಟು ಖರ್ಚನ್ನು ಲೆಕ್ಕಹಾಕಿ ಅದರಮೇಲೆ ಬಾಡಿಗೆಗೆ ಕೊಡುವುದು ಎಂದು ಹೇಳುತ್ತೀರಿ. ಅಂದಮೇಲೆ, ಈ ರೀತಿಯಲ್ಲೂ ಅದರ ಬೆಲೆ prohibitive ಆದರೆ ಏನು ಮಾಡುತ್ತೀರಿ? ಒಂದೊಂದು ಮನೆಗೆ 7-8 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಮೂರು-ನಾಲ್ಕು ಜನರ ಸಂಸಾರಕ್ಕೆ ಆಗುವ ಹಾಗೆ ಕೂಡ ಇಲ್ಲದಷ್ಟು ಮಾಡಿ ಅದಕ್ಕೆ 20 ರೂಪಾಯಿ ಬಾಡಿಗೆ ಕೊಡಬೇಕೆಂದು ಹೇಳಿದರೆ ಏನು ಪ್ರಯೋಜನ? ನೀವು ಕಟ್ಟಿಸುವ ಮನೆಗಳು ವಿಪರೀತ ಬೆಲೆಯಾದರೆ ಬಾಡಿಗೆಯನ್ನು ಹೇಗೆ ವಸೂಲುಮಾಡುತ್ತೀರಿ? ನೀವು ಒಂದುವೇಳೆ ಹೇಳಬಹುದು, Rule making powerನ ಮೇಲೆ ಅದನ್ನು ನಿರಪಡಿಸುತ್ತೇವೆಂದು. ಆಕ್ಟಿನಲ್ಲಿ ದತ್ತವಾಗಿರದ ಅಧಿಕಾರವನ್ನು Rule making powerನಲ್ಲಿ ಚಲಾಯಿಸುವುದಕ್ಕೆ ಹೇಗೆತಾನೆ ಸಾಧ್ಯ? ಆದ್ದರಿಂದ ಇದಕ್ಕೆಲ್ಲಾ ಈ ಆಕ್ಟಿನಲ್ಲೇ ಅವಕಾಶ ಮಾಡುವುದು ಒಂದು.

ಆಮೇಲೆ ಇನ್ನೊಂದು ಅಂತ. ಮುನಿಸಿಪಾಲಿಟಿಯಲ್ಲೇ ಒಂದು ಬಯಲು ಪ್ರದೇಶ ಇರಬಹುದು. ಮುನಿಸಿಪಾಲಿಟಿಯವರು ಅಲ್ಲಿ ಅಂಗಡಿಗಳನ್ನು ಕಟ್ಟಿಸಬೇಕೆಂದಿರಬಹುದು; ನೀವು ಅದಕ್ಕೊಪ್ಪದೆ Labour Housing Board ನವರಿಗೆ ಮನೆ ಕಟ್ಟಲಿಕ್ಕೆ ಕೊಡಬೇಕೆಂದು ಹೇಳಬಹುದು. ಅಂಥ ಸಂದರ್ಭಗಳನ್ನು ಹೇಗೆ ನಿವಾರಣೆಮಾಡುತ್ತೀರಿ? ಜೊತೆಗೆ ಅದಕ್ಕೆ ಏನು ಖರೀದಿ ಕೊಡಬೇಕೆಂಬುದೂ ನಮೂದಿಸಲ್ಪಟ್ಟಿಲ್ಲ. ಲೇಬರ್ ಹೌಸಿಂಗಿಗೆ ಕೊಡುವುದಕ್ಕೆ ಮುಂಚೆ ಟ್ರಸ್ಟ್ ಬೋರ್ಡಿನವರನ್ನಾಗಲಿ, ಕಾರ್ಪೊರೇಷನ್ನಿನವರನ್ನಾಗಲಿ, ಅವರಿಗೆ ಆ ಪ್ರದೇಶ ಬೇಕೇ ಬೇಡವೇ ಎಂಬುದನ್ನು ಕೇಳಿ ಮಾಡುತ್ತೇವೆಂದು ಕೂಡ ಇಲ್ಲಿ ಹೇಳಿಲ್ಲ.

ಇನ್ನೂ ಒಂದು ಏನೆಂದರೆ, ಈ ಕಟ್ಟಡಗಳನ್ನೆಲ್ಲಾ ಕಟ್ಟಿಸಿದಮೇಲೆ, ಅವುಗಳನ್ನು maintain ಮಾಡುವುದಕ್ಕೆ ಮುನಿಸಿಪಾಲಿಟಿಗೇ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಲೇಬರ್ ಹೌಸಿಂಗ್‌ನವರು ಕಟ್ಟಿದ ಮನೆಗಳಿಗೆ ಅವರು ಮುನಿಸಿಪಾಲಿಟಿಗಳಿಗೆ ಕಂದಾಯ ಕೊಡಬೇಕೆಂಬುದನ್ನು ಕೂಡ ಇದರಲ್ಲಿ ಸ್ಪಷ್ಟಪಡಿಸಿಲ್ಲ. ಸರ್ಕಾರದವರು ಕಟ್ಟಿರುವ ಕಟ್ಟಡಗಳೆಂದು ಹೇಳಿ ಅದಕ್ಕೆ ಕಂದಾಯಕೊಡುವುದಿಲ್ಲವೆಂದು ಹೇಳಿದರೆ ಮುನಿಸಿಪಾಲಿಟಿಯವರು maintain ಮಾಡುವುದು ಹೇಗೆ? ಒಂದುವೇಳೆ ಕೊಡುವುದಾದರೂ, what is the rate to be levied for these buildings?

ಆಮೇಲೆ, ಈ ಬೋರ್ಡಿನವರು ವರ್ಷೇ ವರ್ಷೇ ಬಡ್ಜೆಟ್ಟನ್ನು ತಯಾರಿಸಿ, ತಮ್ಮ ಖರ್ಚು, ಸಿಬ್ಬಂದಿ ಮುಂತಾದುವುಗಳಿಗೆಲ್ಲಾ ದುಡ್ಡನ್ನು ಪಡೆಯುತ್ತಾರೆ, ಕೊನೆಗೆ ಬರುವ ವರ್ಷಕ್ಕೆ ಅದನ್ನು ಸಭೆಯಮುಂದೆ ಇಡಬೇಕೆಂದು ಹೇಳಿದೆ: "It must be laid on the table" ಎಂದು ಹೇಳಿದೆ. Whether the Legislature has a right to discuss it and give its views is not known. It is only stated here that "it shall be laid on the table"; the provision is only to lay on the table and not to discuss. ನಾವು ಚರ್ಚೆಮಾಡಿ ಇದರ ಬಡ್ಜೆಟ್ಟು ಜಾಸ್ತಿ ಆಥವಾ ಕಡಮೆ ಎಂದು ಹೇಳಲಿಕ್ಕೆ ಅವಕಾಶವಿರುವಂತೆ ಅದನ್ನು general Budget ನಲ್ಲಿ ಸೇರಿಸಿದ್ದೀರಾ? ಸುಮ್ಮನೆ ಸಭೆಯ ಮುಂದಿಡುತ್ತೀರಿ, ಅಷ್ಟೆ. ಈಗ ಪಬ್ಲಿಕ್ ಸರ್ವಿಸ್ ಕಮಿಷನ್ನರ ವರದಿಯನ್ನೂ ಇದೇರೀತಿ: "It must be laid on the table ಎಂದು ಹೇಳಿದ್ದೀರಿ. ಅದು ಸಭೆಯ ಮುಂದೆ ಬಂದಾಗ 'You have no right to discuss' ಎಂದು ಹೇಳಿದರೆ ಹೇಗೆ?

ಕೊನೆಯದಾಗಿ ಇದರಲ್ಲಿ Private Limited ಕಂಪೆನಿಗಳನ್ನೂ, Public Limited Company ಗಳನ್ನೂ ಇಂಥ ವಿಷಯಗಳಲ್ಲಿ encourage ಮಾಡುವುದಕ್ಕೆ, ಅವರಿಗೆ ಅಕ್ವೈರ್ ಮಾಡಿಕೊಡುವುದಕ್ಕೆ ಅವಕಾಶವೂ ಇಲ್ಲ. ಯಾವರೀತಿಯಲ್ಲಿ apply ಮಾಡುತ್ತೀರಿ ಎಂಬದನ್ನೂ ಕೂಡ ತಿಳಿಸಿಲ್ಲ. Supposing at the same time the Municipality says we want to acquire that area which this Housing Board wants to acquire and build some houses there. ಆಗ ನೀವು ಅವರನ್ನು consult ಮಾಡುವುದಕ್ಕೂ ಅವಕಾಶವಿಲ್ಲದೆ ಇದ್ದರೆ ನಿಮಗೂ ಅವರಿಗೂ ಭಿನ್ನಾಭಿಪ್ರಾಯ ಬರುವುದಿಲ್ಲವೇ?

ಈ ರೀತಿಯಲ್ಲಿ ಈ ಆಕ್ಟಿನಲ್ಲಿ ಆಗಬೇಕಾದ ಬದಲಾವಣೆಗಳು ಅನೇಕವಾಗಿವೆ. ಅವೆಲ್ಲಾ ಸರಿಯಾದ ಮೇಲೆ ಇದು ನಿಜವಾಗಿಯೂ ಸ್ವಾಗತಾರ್ಹವಾಗಿದೆಯೆಂದು ಹೇಳಬಹುದು. ಇದರಲ್ಲಿ ಇನ್ನೊಂದು ವಿಷಯ ನಮೂದಿಸಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿರುವ ಮಧ್ಯಮ ತರಗತಿಯವರಲ್ಲಿಯೂ ಮತ್ತು ಕೀಳು ತರಗತಿಯವರಲ್ಲಿಯೂ ವಾಸದ ಮನೆಗಳ ಅಭಾವ ಬಹಳ ಜಾಸ್ತಿಯಾಗಿದೆಯೆಂದು ಇಲ್ಲಿ ಅರ್ಥ ವಿವರಣೆಯಲ್ಲಿ ತಿಳಿಸಿದ್ದೀರಿ. 'Rural area' ದಲ್ಲಿರುವ ನೌಕರರು ಯಾರು? ಏನಿದ್ದರೂ ಗ್ರಾಮಪಂಚಾಯಿತಿಗಳಲ್ಲಿರುವ ಒಬ್ಬಿಬ್ಬರು ಜವಾನರಿರಬಹುದು. ಅಂದಮೇಲೆ ಇದು ಗ್ರಾಮಾಂತರ ಪ್ರದೇಶಗಳಿಗೆ ಅನ್ವಯಿಸುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಯಾವಾಗ industrial labour ಎಂದು ಹೇಳುತ್ತೀರೋ, ಅದರಮೇಲೆ ಬೇರೆಯವರ ವಿಚಾರವೇ ಇಲ್ಲಿ ಬರುವುದಿಲ್ಲ. ಇಲ್ಲಿ Objects and Reasonsನಲ್ಲಿ ಹೇಳಿರುವುದರ ಅರ್ಥವೇ ಸರಿಯಾಗಿ ಆಗುವುದಿಲ್ಲ.

> "With a view to providing for the welfare of Industrial labour by making provision for proper housing accommodation and for other connected purposes."

What are the other connected purposes? There is no connected purpose at all in the State other than that the Mysore Labour Act was enacted and it has been in force for some time. ಆಮೇಲೆ ಇಲ್ಲಿ ಹೇಳಿದೆ:

(ಶ್ರೀ ಎ. ಭೀಮಪ್ಪನಾಯಕ್.)

"The Housing problem has become acute in the case of other lower middle classes and other low income groups of the population in rural and urban areas."

ಇದರಲ್ಲಿ ಹೇಳಿರುವ ಪ್ರಕಾರ ಜನರಲ್ಲಿ ಬಡವರಾಗಿರುವ ವರಿಗೆ, ಹಳ್ಳಿಗಳಲ್ಲಿ ಮತ್ತು ದೊಡ್ಡ ದೊಡ್ಡ ಸ್ಥಳಗಳಲ್ಲಿ ತಕ್ಕ ಉತ್ಪತ್ತಿಯಿಲ್ಲದಿರುವ ಮನೆ ತೊಂದರೆಯಿರುವು ದನ್ನು ತಪ್ಪಿಸುವುದಕ್ಕೆ ಸಾರ್ವತ್ರಿಕವಾಗಿ ಅವಕಾಶ ಮಾಡಿದೆಯೇ ಎಂದರೆ ಅದೂ ಇಲ್ಲ. ಒಂದೊಂದು ಸೆಕ್ಷನ್ ನಲ್ಲೂ lobours ಎಂದರೆ ಸರ್ಕಾರಿ ಕೆಲಸದಲ್ಲಿರುವ labourersಗಳು ಕೈಗಾರಿಕೆಯಲ್ಲಿರುವ ಲೇಬರರುಗಳೆಂದು ಆಗುತ್ತದೆಯೇ ವಿನಾ ಬೇರೆಯವರು ಸೇರುವುದಿಲ್ಲ. Labourers ಎಂಬುದರಲ್ಲಿ Agricultural labourers ಕೂಡ ಸೇರಿಸಿರುವಂತೆ ತೋರುವುದಿಲ್ಲ.

ಒಟ್ಟಿನಲ್ಲಿ ನೋಡಿದರೆ, ಯಾವುದಾದರೂ industrial labour ಇದ್ದರೆ, ಅವರಿಗಾಗಿ ಕಟ್ಟಿಸಬೇಕಾದರೆ ಪರಸ್ಪರ consultations ಇರುತ್ತದೆಯೆ ಅವರು ಯಾವ proportion ಪಾವತಿ ಮಾಡಬೇಕು, ಎಷ್ಟು ಡಿಪಾಸಿಟ್ ಮಾಡಬೇಕು, ಒಟ್ಟು ಅವರು ಎಷ್ಟು ಹಣ ಕೊಡಬೇಕು ಎಂಬ ಬಗ್ಗೆ ಯಾವ ವಿವರಗಳೂ ಇದರಲ್ಲಿಲ್ಲ.

ಅಲ್ಲದೆ ಇದರಲ್ಲಿ ಕೆಲವು ಅಧಿಕಾರಗಳಿವೆ. ಯಾರಾದರೂ ಮನೆ ಬಿಟ್ಟುಬಿಡಬೇಕಾದರೆ, ಆ ಸಂದರ್ಭದಲ್ಲಿ ಅವರೇನಾದರೂ ಅಡ್ಡಿ ತಂದರೆ ಸಜಾ, ಜುಲ್ಮಾನೆ ಮುಂತಾದ penal provisions ಇವೆ. ಅವರೇನಾದರೂ ಮನೆ ಬಿಟ್ಟು ಹೋದಾಗ ಸಾಮಾನುಗಳನ್ನು ಬಿಟ್ಟು ಹೋದರೆ ಅವನ್ನು ಯಾವ ರೀತಿ ಮಾಡಬೇಕು, ಅವರಿಗೇ ವಾಪಸುಕೊಡುತ್ತಾರೆಯೆ ಎಂಬುದು ನಮೂದಾಗಿಲ್ಲ. ಇನ್ನು ನೋಟೀಸ್ ಕೊಡುವುದರಲ್ಲಿ ಆ ಮನೆಯಲ್ಲಿರುವವರ ಮೇಲೆ ಜಾರಿಮಾಡಲು ಸಾಧ್ಯವಿಲ್ಲದಿರುವಾಗ ಮನೆ ಬಾಗಿಲಿಗೆ ನೋಟೀಸನ್ನು ಹಚ್ಚುವುದು ಎಂದಿದೆ. ಈ ಕೆಲಸ ನಿರ್ವಹಿಸುವ ಅಧಿಕಾರಿ ತಾನು ನೋಟೀಸ್ ಹಚ್ಚಿದ್ದೇನೆಂದು ಹೇಳುತ್ತಾನೆ, ಆ ನೋಟೀಸ್ ಯಾರಿಗೆ ಕೊಟ್ಟಿತ್ತೋ ಅವನು ಇಲ್ಲವೆಂದು ಹೇಳುತ್ತಾನೆ, ಆಗೇನು ಮಾಡಬೇಕು? ಇದರಲ್ಲೇನೋ ಮನೆಯ ಬಾಗಿಲಿಗೆ ಹಚ್ಚಬೇಕೆಂದಿದೆ. ಇದಕ್ಕೆಲ್ಲಾ safety measures ಇರಬೇಡವೆ? ನೋಟೀಸ್ ಕೊಡುವ ವಿಧಾನವೂ ಸರಿಯಾಗಿ ನಿಗದಿಯಾಗಿಲ್ಲ. They should not go between sunset and sunrise ಎಂದು ಹಾಕಿಕೊಂಡಿದ್ದಾರೆ. ಇದರಲ್ಲಿಯೂ the force that they are entitled to use ಮುಂತಾದ ವಿವರಗಳೊಂದೂ ಇಲ್ಲ. Some of these provisions, to say the least, are obnoxious. ಆದುದರಿಂದ.....

Sri J. MOHAMED IMAM (Jagalur).—So it is obnoxions!

Sri A. BHEMAPPA NAIK.—If some of these words are changed, it will be useful even for Sri. Imam.

Sri J. MOHAMED IMAM.—If the entire Act is changed it will be more useful.

Sri A. BHEEMPPA NAIK.- Here and there some changes are necessary. Some additions and some omissions are necessary. ಆದುದರಿಂದ ನನ್ನ ನಲಹೆಯೇ ನೆಂದರೆ, ಈ ಮನೂದೆ ಸೆಲಕ್ಟ್ ಕಮಿಟಿಯ ಮುಂದೆ ಹೋಗಲಿ, ತಾವೂ ನಾವೂ ಸೇರಿ ಇದನ್ನು ಪರಿಶೀಲನೆ ಮಾಡೋಣ, threadbare ಆಗಿ ಚರ್ಚೆಮಾಡೋಣ ಎಂಬುದು. ಒಟ್ಟಿನಲ್ಲಿ ಈ ಮನೂದೆ ಸ್ವಾಗತಾರ್ಹ ವಾದುದರಿಂದ ಸ್ವಾಗತಿಸುತ್ತೇನೆ.

ಶ್ರೀ ಡಿ. ವೆಂಕಟೇಶ್ (ಗಾಂಧೀನಗರ).—ಸ್ವಾಮಿ, ನಮ್ಮ veteran parliamentarian ಶ್ರೀ ಭೀಮಪ್ಪನಾಯಕರು ಈ ಮನೂದೆಯನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿಯೂ ಈ ಮನೂದೆ ಸ್ವಾಗತಾರ್ಹವಾಗಿದೆ. ಈ ಮಂತ್ರಿಮಂಡಲ ಬಂದ ಮೇಲೆ ಅನೇಕ ಒಳ್ಳೆಯ ಕಾನೂನುಗಳನ್ನು ಮಾಡಿರುವುದರಲ್ಲಿ ಇದೂ ಒಂದು ಒಳ್ಳೆಯ ಕಾನೂನೆಂಬುದನ್ನು ಯಾರೂ ಮರೆಯಬಾರದು ಮತ್ತು ಇದರಲ್ಲಿ ಭಿನ್ನಾಭಿಪ್ರಾಯವೂ ಇಲ್ಲವೆಂದು ಭಾವಿಸುತ್ತೇನೆ. ಇದರ ಉದ್ದೇಶವನ್ನು ಈ ಮನೂದೆಯ Statements of Objects and Reasonsನಲ್ಲಿ ಹೇಳಿದ್ದಾರೆ. 1948 ನೆಯ ಇಸವಿಯ ಮೈಸೂರು Lobour Housing Act ಇದೆ. ಅದರಲ್ಲಿ ಬರಿಯ ಕಾರ್ಮಿಕರಿಗೆ ಮಾತ್ರ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಅವಕಾಶಮಾಡಿದ್ದಾರೆ; ಇತರ ವರ್ಗದ ಜನರಿಗಿಲ್ಲ; ನಮ್ಮ ದೇಶಾದ್ಯಂತ ವಾಸಕ್ಕೆ ಮನೆಗಳಿಲ್ಲದ ಜನತೆಗೆ ಮನೆಗಳನ್ನು ಕಟ್ಟಿಸುವುದಕ್ಕೆ ಅವಕಾಶಮಾಡಿಲ್ಲ ಎಂದು ಅನೇಕರು ಹೇಳುತ್ತಿದ್ದರು. ಆದುದರಿಂದ ಈ ಮನೂದೆಯನ್ನು ತರಲಾಗಿದೆ. ಇದನ್ನು ತರುವುದಕ್ಕೆ ಕಾರಣವನ್ನು ಇದರ Statement of Objects and Reasons ನಲ್ಲಿ ಬಹಳ ಚೆನ್ನಾಗಿ ಸ್ಪಷ್ಟಪಡಿಸಿದ್ದಾರೆ. ಬರಿಯ ಕಾರ್ಮಿಕರಿಗೇ ಅಲ್ಲ, ಸರ್ಕಾರಿ ಅಧಿಕಾರಿಗಳಿಗೇ ಅಲ್ಲ, ಇಡೀ ದೇಶದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿಯೂ ನಗರ ಪ್ರದೇಶಗಳಲ್ಲಿಯೂ ಇರುವ ಕಡಮೆ ವರಮಾನ ಪಡೆಯುತ್ತಿರುವ ಎಲ್ಲರಿಗೂ ಗೃಹ ವಸತಿ ಕಲ್ಪಿಸಿಕೊಡುವುದಕ್ಕೆ ಅವಕಾಶ ಮಾಡಿದೆ ಎಂದು ಹೇಳಿದ್ದಾರೆ. ಇದು ಬಹಳ ಒಳ್ಳೆಯದು. ನಮ್ಮ ದೇಶದಲ್ಲಿ ದುಡಿಯುವ ಜನರಿಗೆ ಕೆಲಸಗಳನ್ನು ಕಲ್ಪಿಸಿ ನಿರುದ್ಯೋಗವನ್ನು ನಿವಾರಣೆ ಮಾಡಿ ಗೃಹವಸತಿ ಸಮಸ್ಯೆಯನ್ನು ಪರಿಹಾರ ಮಾಡಿದರೆ, ದೇಶ ಉಳಿಯುತ್ತದೆ, ಅಭಿವೃದ್ಧಿಯಾಗುತ್ತದೆ; ಅಲ್ಲದೆ ಜನತೆಗೂ ಸಂತೋಷವಾಗುತ್ತದೆ. ಪ್ರಥಮತಃ ಮನೆಗಳ ಕಷ್ಟವನ್ನು ಪರಿಹಾರ ಮಾಡುವುದಕ್ಕಾಗಿ ಈ ಮನೂದೆಯನ್ನು ತಂದಿದ್ದಾರೆ. ಇದು ಬಹಳ ಉತ್ತಮವಾದ ಕೆಲಸ. ಇದರಲ್ಲಿಯೂ ಮೊದಲು Mysore Labour Housing Act ಎಂದಿತ್ತು. ಅದರಲ್ಲಿ discriminate ಮಾಡಿ ಬರಿಯ ಒಂದು ವರ್ಗದವರಿಗೆ ಮಾತ್ರ ಅನುಕೂಲಮಾಡಿಕೊಡಲು ಅವಕಾಶವಿತ್ತು. ಇಡೀ ಜನತೆಗೆ ಅದೇ ಅನುಕೂಲ ಮಾಡುವುದಕ್ಕೆ ಅವಕಾಶಮಾಡಿರಲಿಲ್ಲ. ನಾನು ಕಾರ್ಮಿಕ ಕ್ಷೇತ್ರದಲ್ಲಿ ಕೆಲಸಮಾಡುವವನು, ಆದರೂ ಎಲ್ಲರಿಗೂ ಅನುಕೂಲವಾಗಬೇಕೆಂಬುದು ನನ್ನ ಅಭಿಪ್ರಾಯ. ನಮಗೆ ಮಾತ್ರ ಅನುಕೂಲವಾಗಿರುವುದನ್ನು ರದ್ದುಮಾಡಿ ಈ ಒಂದು composite legislation ಮಾಡಿ, ಇತರ ಬೇರೆ ಜನರಿಗೂ ಮನೆ ವಸತಿಯನ್ನು ಮಾಡುವುದಕ್ಕೆ ಏರ್ಪಾಡುಮಾಡಿದ್ದಾರೆ. ಹೀಗೆ ಮಾಡುವಾಗ ಇನ್ನೂ ಅನೇಕ ವಿಷಯಗಳನ್ನು ಇದರಲ್ಲಿ ಅಡಕಮಾಡಬೇಕಾದುದು ಅಗತ್ಯವಾಗಿತ್ತು. ಇದನ್ನು ಶ್ರೀ ಭೀಮಪ್ಪನಾಯಕರು ಚೆನ್ನಾಗಿ ಹೇಳಿದ್ದಾರೆ. ಕೇಂದ್ರ ಸರ್ಕಾರದ ಕಾನೂನಿದೆ. ಕೇಂದ್ರ ಸರ್ಕಾರ

ದವರು ಇದಕ್ಕಾಗತಕ್ಕ ಖರ್ಚಿನಲ್ಲಿ ಅರ್ಧಭಾಗವನ್ನು ನಮ್ಮ ಸರ್ಕಾರಕ್ಕೆ ಕೊಡುತ್ತಿದ್ದಾರೆ. ಕೋ-ಆಪರೇಟಿವ್ ಸಂಘಗಳ ಮೂಲಕ ಈ ಕೆಲಸವನ್ನು ಮಾಡಿಸಿದರೆ ಅದಕ್ಕೆ ಶೇಕಡ 25ರಷ್ಟು ದ್ರವ್ಯ ಸಹಾಯ ಕೊಡುತ್ತಾರೆ. ಉಳಿದುದನ್ನು ಸಾಲವಾಗಿ ಪರಿಗಣಿಸಿ ಅದರ ಮೇಲೆ ಶೇಕಡ 3ರಷ್ಟು ಬಡ್ಡಿಕೊಟ್ಟು ಸಾಲವನ್ನು ತೀರಿಸಬಹುದು. ನಮ್ಮ ಸರ್ಕಾರದವರು ಈಗಾಗಲೇ ಕೇಂದ್ರ ಸರ್ಕಾರದಿಂದ 40 ಲಕ್ಷ ರೂಪಾಯಿಗಳವರೆಗೆ ತೆಗೆದುಕೊಂಡಿದ್ದಾರೆ. ನಮ್ಮಲ್ಲಿ ಈಗಾಗಲೇ Labour Housing Act ಜಾರಿಯಲ್ಲಿದೆ. ಇದರ ಪ್ರಕಾರ ಇದುವರೆಗೆ ಮನೆಗಳನ್ನು ಕಟ್ಟುತ್ತಿದ್ದಾರೆ. ಈ ಬಗ್ಗೆ ಅಂಕಿಅಂಶಗಳನ್ನು ಮಾನ್ಯ ಮಂತ್ರಿಗಳು ಸಭೆಯ ಮುಂದಿಟ್ಟಿದ್ದಾರೆ. ಈಗ ಜನತೆಯಲ್ಲಿ ಯಾರಾದರೂ ಆಗಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಉದ್ದೇಶಪಿದ್ದರೆ ಅವರಿಗೂ ಇಂಥ ಒಂದು ಸಹಾಯವನ್ನೊದಗಿಸುವುದಕ್ಕೆ ಅವಕಾಶ ಮಾಡಿದ್ದರೆ ಚೆನ್ನಾಗಿತ್ತು. ಅಲ್ಲದೆ ಇಲ್ಲಿ ಸಹಾಯ ದ್ರವ್ಯವನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಸಿ ಬಾಡಿಗೆ ವಸೂಲು ಮಾಡುವ ಥೋರಣೆಯಿರುವುದನ್ನು ನಾವು ವ್ಯಥೆಯಿಂದ ಹೇಳಬೇಕಾಗಿದೆ. ಇದರಿಂದ ಸರ್ಕಾರಕ್ಕೂ ಲಾಭವಿಲ್ಲ ಜನತೆಗೂ ಲಾಭವಿಲ್ಲ. ಜನತೆಗೆ ಒಳ್ಳೆಯದಾಗಬೇಕೆಂಬ ಉದ್ದೇಶದಿಂದ, ಮನೆಗಳ ಅಭಾವದ ಕಷ್ಟವನ್ನು ಪರಿಹಾರ ಮಾಡುವುದಕ್ಕೆ ಸಂಪೂರ್ಣ ಅವಕಾಶ ಮಾಡಿದ್ದರೆ ಚೆನ್ನಾಗಿತ್ತು, ಆದರೆ ಹಾಗಿಲ್ಲದೆ ಮನೆಗಳನ್ನು ಕಟ್ಟಿಸಿ ಬಾಡಿಗೆ ವಸೂಲು ಮಾಡುವುದನ್ನು nationalise ಮಾಡುವ ಥೋರಣೆ ಇದರಲ್ಲಿದೆ. ಇದು ಅಷ್ಟು ಸರಿಯಾದುದಲ್ಲ. ಇದನ್ನು ಸರ್ಕಾರದವರು ಯೋಚನೆಮಾಡುವುದು ಅತ್ಯಗತ್ಯವೆಂದು ಹೇಳುತ್ತೇನೆ.

Mysore Labour Housing Actನ 3ನೆಯ ಸೆಕ್ಷನ್‌ನಲ್ಲಿ ಮಾಲೀಕರು ಯಾವ ಕೆಲಸಗಾರರಿಗಾಗಿ ಮನೆಗಳನ್ನು ಕಟ್ಟಿಸಿ ಕೊಟ್ಟಿಲ್ಲವೋ, ಆ ಮಾಲೀಕರಿಂದ ಅವರು ಕೆಲಸಗಾರರಿಗೆ ಕೊಡುವ wagesನ ಅಥವಾ ಸಂಬಳದ ಶೇಕಡ 4ಕ್ಕೆ ಮೀರದಷ್ಟು ಕಾಂಟ್ರಿಬ್ಯೂಷನ್ ಅನ್ನು ಅಧಿಕಾರಿಗಳು ವಸೂಲು ಮಾಡತಕ್ಕದ್ದೆಂದಿದೆ. ಆದರೆ ಈ Mysore Housing Board ಷೆಡ್ಯೂಲ್‌ನಲ್ಲಿ ಅದಕ್ಕೊಂದು ತಿದ್ದುಪಡಿ ಮಾಡಿ, Billನ ಒಂದನೆಯ ಮಾಲೀಕ ತಾನೇ ಆ ಕಾಂಟ್ರಿಬ್ಯೂಷನ್ ಕೊಡುವಷ್ಟು ಹಣ ಖರ್ಚುಮಾಡಿ ಮನೆಗಳನ್ನು ಕಟ್ಟಿಸಿಕೊಟ್ಟರೆ ಅವನು ಕಾಂಟ್ರಿಬ್ಯೂಷನ್ ಕೊಡಬೇಕಾಗಿಲ್ಲವೆಂದು ಮಾಡಿದ್ದಾರೆ. ಇದು ಒಳ್ಳೆಯದಲ್ಲ. ಆದರೆ ಇದಕ್ಕಾಗಿ capital ಎಷ್ಟು ದುಡ್ಡು ವಸೂಲಾಗುತ್ತಿತ್ತೋ ಅಷ್ಟು ಹಣಕಾಸಿನ ಪರಿಸ್ಥಿತಿ ಈಗ ಮಾಲೀಕರಲ್ಲಿಯೇ ಉಳಿದು ಸರ್ಕಾರಕ್ಕೆ ನಷ್ಟ ಆಗುತ್ತದೆ. ಆದುದರಿಂದ ಇದಕ್ಕೆ Government Property ಎಂಬ ಹೆಸರು ಇಲ್ಲದಂತೆ ಆಗುತ್ತದೆ ಎಂಬ ಅಂಶ ಗಮನಾರ್ಹವಾಗಿದೆಯೆಂದು ಸಹ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇದರಲ್ಲಿ ಇನ್ನೊಂದು ವಿಚಾರ ಅಡಕವಾಗಿದೆ. ನಮ್ಮ ದೇಶದಲ್ಲಿ ಎಲ್ಲಾ ಕಡೆಯೂ ಈಗ ಹಾಲಿ ಇರತಕ್ಕ ಮನೆಗಳ ವಿಚಾರದಲ್ಲಿ ಮಾಲೀಕನಾದವನು ಮನೆಯನ್ನು ಸ್ವಂತ ಉಪಯೋಗಕ್ಕೆ ಬಿಡಿಸಿಕೊಳ್ಳಲು eviction of the tenant ಆರ್ಡರನ್ನು ಪಡೆಯುವುದಕ್ಕಾಗಲಿ ಅಥವಾ ಅದಕ್ಕೆ fair rent ಗೊತ್ತುಮಾಡಿಸಿಕೊಳ್ಳುವುದಕ್ಕಾಗಲಿ Mysore House Accommodation and Rent Control Act ಪ್ರಕಾರ ಅವಕಾಶವನ್ನು ಪಡೆದಿರುವಾಗ ಈ ಹೌಸಿಂಗ್ ಬೋರ್ಡ್ ಬಿಲ್ಲಿಗೆ ಒಳಪಡುವ ಮನೆಗಳಿಗೆ ಇದಕ್ಕೆ exemption ಕೇಳಿರುತ್ತಾರೆ. ಇದು ಅನ್ಯಾಯ. ದೇಶದಲ್ಲಿ ಎಲ್ಲಾ ಕಡೆಯೂ ಇರತಕ್ಕ ಕಾನೂನು ಸೌಕರ್ಯ ಇದಕ್ಕೂ ಅನ್ವಯಿಸುವಂತಿರಬೇಕು. ಹಾಗಿಲ್ಲದಿದ್ದರೆ ಈ ಹೌಸಿಂಗ್ ಬೋರ್ಡಿನ ಮನೆಗಳನ್ನು ಪಡೆದಿರುವವರ ವಿಚಾರದಲ್ಲಿ ಅಧಿಕಾರಿಗಳು ತಮ್ಮ ಇಷ್ಟಬಂದ ರೀತಿಯಲ್ಲಿ ವರ್ತಿಸುವ ಮನೋಭಾವ, ಒಂದು ಥೋರಣೆ ತಾಳುತ್ತಾರೆ. ಅದಕ್ಕೆ ಅವಕಾಶವಿರಬಾರದು. ಆದುದರಿಂದ ಈ exemption ಏರ್ಪಡಿಸುವುದು ನ್ಯಾಯವಲ್ಲವೆಂದು ಅಭಿಪ್ರಾಯಪಡುತ್ತೇನೆ.

ಸೆಕ್ಷನ್ 24ರಲ್ಲಿ ಅನೇಕ ಕಾರ್ಯಕ್ರಮಗಳನ್ನು ಸೂಚಿಸುತ್ತಾ ಒಂದು ಮುಖ್ಯ ವಿಚಾರವನ್ನು ಬಿಟ್ಟಿರುತ್ತಾರೆ. ಅಲ್ಲಿ ಪೆಟ್ರಿನಿಟಿ ಹೋಂ, ಆಸ್ಪತ್ರೆ, ಮಾರ್ಕೆಟ್, ಸ್ಕೂಲ್ ಕಟ್ಟಡ, ದೋಬಿಖಾನೆ, washing facilities—ಇವುಗಳನ್ನು ಬಿಟ್ಟಿರುತ್ತಾರೆ. ಇವುಗಳನ್ನು ಬೇಕಾದರೆ ಮುನಿಸಿಪಾಲಿಟಿಯವರೋ, ಡಿಸ್ಟ್ರಿಕ್ಟ್ ಬೋರ್ಡಿನವರೋ ಅಥವಾ ಪಂಚಾಯಿತಿ ಬೋರ್ಡಿನವರೋ ಮಾಡಿಕೊಳ್ಳಲಿ ಎಂಬ ಉದ್ದೇಶದಿಂದ ಹೀಗೆ ಮಾಡಿರಬಹುದು. ಆದರೆ ಈ ಹೌಸಿಂಗ್ ಬೋರ್ಡಿನವರು ಮನೆಗಳಿಗಾಗಿ land acquire ಮಾಡಿಕೊಂಡು ತಮ್ಮ ವ್ಯಾಪ್ತಿಗೆ ಅದನ್ನು ಒಳಪಡಿಸಿಕೊಂಡು, ಅದರ ಆದಾಯವನ್ನೆಲ್ಲಾ ಸಂಪಾದಿಸಿ, ಈ health and sanitation ವಿಚಾರದಲ್ಲಿ ಮಾತ್ರ ಬೇರೆ ಬೋರ್ಡಿಗೆ ವಹಿಸುವುದು ಸರಿಯಾಗಿದೆಯೇ ಎಂಬುದನ್ನು ಯೋಚನೆಮಾಡಬೇಕಾದ ವಿಚಾರವಾಗಿದೆ. ಈ ಮಸೂದೆಯಲ್ಲಿ ನಮೂದಾಗಿರುವ ಪ್ರಕಾರ ಒಂದು planned basis ಮೇಲೆ ಮನೆಗಳನ್ನು ಕಟ್ಟಿಕೊಳ್ಳಲು ಅವಕಾಶವಿದೆ. ಈ ರೀತಿ ನೂರಾರು, ಸಾವಿರಾರು ಮನೆಗಳನ್ನು ಕಟ್ಟಿದಮೇಲೆ ಆ ಪ್ರದೇಶದಲ್ಲಿ ಒಂದು ಪೆಟ್ರಿನಿಟಿ ಹೋಂ, ಒಂದು ಮಾರ್ಕೆಟ್, ಒಂದು ಆಸ್ಪತ್ರೆ, ಹುಡುಗರಿಗೆ ಓದುವುದಕ್ಕೆ ಸ್ಕೂಲ್ ಇತ್ಯಾದಿ ಸೌಕರ್ಯಗಳಿಲ್ಲದಿದ್ದರೆ ಅಷ್ಟು ವಾಸದ ಮನೆಗಳಿದ್ದೂ ಪ್ರಯೋಜನವಾಗುವುದಿಲ್ಲ. ಈ ಸೌಕರ್ಯಗಳನ್ನು ಅಲ್ಲಿ ವಾಸಮಾಡುವವರು ಪಡೆಯಬೇಕಾದರೆ ಅಲ್ಲಿಂದ 2-3 ಮೈಲಿಗಳ ದೂರ ಹೋಗಿ ಅವಕಾಶ ಪಡೆಯಬೇಕಾಗುತ್ತದೆ. ಆದುದರಿಂದ planned basis ಮೇಲೆ ಮನೆಗಳನ್ನು ಕಟ್ಟುವುದರ ಜೊತೆಗೆ ಈ ಅವಕಾಶವನ್ನೂ ಅಲ್ಲಿ ಕಲ್ಪಿಸಿಕೊಳ್ಳುವುದುಚಿತ ಮತ್ತು ನ್ಯಾಯ. 24ನೆಯ ಸೆಕ್ಷನ್ ಪ್ರಕಾರ ಈ ಅವಕಾಶವನ್ನು ಕಲ್ಪಿಸುವುದು ಅತ್ಯಗತ್ಯವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

36ನೆಯ ಸೆಕ್ಷನ್ ಪ್ರಕಾರ ಈ ಬೋರ್ಡಿಗೆ ಮನೆಗಳನ್ನು ಕಟ್ಟಿಸುವ ವಿಚಾರದಲ್ಲಿ ಹಲವು ವ್ಯಾಪ್ತಿಯುಳ್ಳ ಅವಕಾಶ ಮತ್ತು ಅಧಿಕಾರವನ್ನು ಕಲ್ಪಿಸಿದೆ. ಘನ ಉದ್ದೇಶವಿಟ್ಟುಕೊಂಡು ಸರ್ಕಾರದವರು ಎಲ್ಲಾ cover up ಮಾಡಿರುತ್ತಾರೆ. ಆದರೆ ಈ ಕೆಲಸಗಳನ್ನು departmental ಆಗಿ ನಡೆಸಬೇಕೇ ಹೊರತು, contract system ಮೇಲೆ ಇವುಗಳನ್ನು ನಿರ್ವಹಿಸುವುದು ಸರಿಯಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ. ಈ ವಿಚಾರವನ್ನು ಪ್ರಸ್ತಾಪಿಸುತ್ತಾ ಶ್ರೀ ಎ. ಭೀಮಪ್ಪ ನಾಯಕರು ಹೇಳಿದರು, ಮುನಿಸಿಪಾಲಿಟಿ ಮತ್ತು ಲೋಕಲ್ ಪಂಚಾಯಿತಿ ಬೋರ್ಡಿನವರನ್ನು ಕೇಳದೆ ಅವರು ಎಲ್ಲಬೇಕಾದರೂ acquire ಮಾಡಿಕೊಳ್ಳಬಹುದು ಎಂದು. ಆದರೆ ಈ ವಿಚಾರದಲ್ಲಿ 31ನೆಯ ಸೆಕ್ಷನ್‌ನಲ್ಲಿ ಯಾವರೀತಿ ನಡೆಯಬೇಕೆಂಬುದನ್ನು ಚೆನ್ನಾಗಿ ತಿಳಿಸಿರುತ್ತಾರೆ. Land Acquire ಮಾಡಿ

(ಶ್ರೀ ಡಿ. ವೆಂಕಟೇಶ್.)

